**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.202/2021

**PW**. 10

**CW**. 8

**ಸಾಕ್ಷಿಯ ಹೆಸರು -ಸಿದ್ಧರಾಜು**

**ತಂದೆಯ ಹೆಸರು -ಮಹದೇವಶೆಟ್ಟಿ**

**ವಯಸ್ಸು -40 ವರ್ಷಗಳು** ದಿನಾಂಕ 09-10-2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ -ಕೂಲಿ ಕೆಲಸ**

**ವಾಸಸ್ಥಳ -ಸಣ್ಣೇಗೌಡರ ಕಾಲೋನಿ , ಹುಣಸೂರ ತಾಃ**

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

ಚಾಸಾ-1 , 2 ಹಾಗೂ ಆರೋಪಿತರು ಗೊತ್ತು. ಅವರ ನಡುವೆ ಆದ ಗಲಾಟೆಯನ್ನು ನಾನು ನೋಡಿಲ್ಲ , ಈಗ್ಗೆ 4 ವರ್ಷಗಳ ಹಿಂದೆ ಆರೋಪಿತರು ಮತ್ತು ಫಿರ್ಯಾದುದಾರರ ಮನೆಯ ಮುಂದೆ ಪೊಲಿಸೀರು ಒಂದು ಪಂಚನಾಮೆಗೆ ನನ್ನ ಸಹಿ ಪಡೆದರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ. ಸ್ಥಳದಲ್ಲಿ ಫೋಟೋ ತೆಗೆದ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆಗೆ ಬೇರೆ ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**SC No.202/2021**
**PW.10**

**ಪಾಟೀಸವಾಲುಃ- ಸರ್ಕಾರಿ ಅಭಿಯೋಜಕರಿಂದಃ-**

ನಿಪಿ-3 ಮತ್ತು 6 ರ ಫೋಟೋದಲ್ಲಿ ನಾನು ಕಾಣುತ್ತೇನೆ ಎಂದರೆ ಸರಿ . ನಿಪಿ-7 ರಿಂದ 9 ರ ಫೋಟೋಗಳಲ್ಲಿ ಪೊಲೀಸರು ಸ್ಥಳದಲ್ಲಿದ್ದ ರಕ್ತಸಿಕ್ತ ಮಣ್ಣು, ಸಾದಾ ಮಣ್ಣು ಹಾಗೂ ಟವಲ್ ಜಪ್ತಿ ಮಾಡುತ್ತಿದ್ದಾರೆ ಎಂದರೆ ಸರಿ . ಸದರಿ ಟವಲ್ ನ್ಯಾಯಾಲಯದ ಮುಂದಿರುವ ಟವಲ್ ಎಂದರೆ ನನಗೆ ಗೊತ್ತಿಲ್ಲ.

ದಿಃ 18-04-2020 ರಂದು ಮಧ್ಯಾಹ್ನ 1.30 ರಿಂದ 2.30 ವರೆಗೆ ನಿಪಿ-2 ರಂತೆ ಪೊಲೀಸರು ಪಂಚನಾಮೆ ಮಾಡಿ, ನನ್ನ ಸಮಕ್ಷಮ ನಿಪಿ-3 ರಿಂದ 9 ರ ಫೋಟೋಗಳನ್ನು ತೆಗೆದು ಮು,ಮಾ-2 ರಿಂದ 4 ಗಳನ್ನು ಜಪ್ತಿ ಮಾಡಿದರು ಎಂದರೆ ಸರಿಯಲ್ಲ. ಚಾಸಾ-1 ಹಾಗೂ 7 ರವರು ಪಂಚನಾಮೆಗೆ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-2 ರ ಪಂಚನಾಮೆ, ಮು.ಮಾ-2 ರಿಂದ 4 ಹಾಗೂ ಫೋಟೋಗಳ ಬಗ್ಗೆ ಎಲ್ಲ ಮಾಹಿತಿ ಇದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಆರ್ ಎಂ ಎಸ್ ವಕೀಲರಿಂದಃ-**

ಏನೂ ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.